ಪುನಃ ಇವರು ಕೋರ್ಟಿಗೆ ಹೋಗಲಿ ಎಂದು ಬದಲಾವಣೆ ಮಾಡುತ್ತಾರೆನ್ನುವ ಸಂಶಯ ನಮಗೆ ಬರುತ್ತದೆ. ಈ ಕಾರಣಕ್ಕಾಗಿ ಮಾಡುವುದಕ್ಕಾಗಿಲ್ಲವೆಂದು ಇವರು ಹೇಳಬೇಕು.

ಅಧ್ಯಕ್ಷರು: ಕೋರ್ಟಿನ ಆದೇಶದನ್ವಯ ಮಾಡಲೇಬೇಕಲ್ಲವೆ? The Government cannot avoid. They have to conduct elections.

ಶ್ರೀ ಎಸ್.ಎಸ್. ಪಾಟೀಲ್: ಈಗಾಗಲೇ ರಾಜ್ಯಪತ್ರದಲ್ಲಿ ಪ್ರಕಟಿಸಿರುವಂತೆ ಬದಲಾವಣೆ ಆಗುವುದಿಲ್ಲವೆ? ಈಗಾಗಲೇ ಪ್ರಕಟಿಸಿರುವ ರಾಜ್ಯಪತ್ರಗಳು ಎಲ್ಲಾ ಪುರಸಭೆಗಳಿಗೂ ಹೋಗಿದ್ದು ಪುನಃ ನೀವು ಆದರಲ್ಲಿ ಬದಲಾವಣೆ ಮಾಡುತ್ತೀರಾ? ಆಥವಾ ಇಲ್ಲವೆ? ಎಂಬುದನ್ನು ಹೇಳಿ.

ಅಧ್ಯಕ್ಷರು: ಉತ್ತರ ಈಗಾಗಲೇ ಹೇಳಿದ್ದರಲ್ಲಾ. ಎಷ್ಟು ಸಲ ಉತ್ತ ಕೇಳುತ್ತೀರಿ.

(ಗೊಂದಲ)

SRI D.B. CHANDRE GOWDA: They cannot force me to say as they want.

ಅಧ್ಯಕ್ಷರು: ಚುನಾವಣಾ ಆಯೋಗಕ್ಕೆ ಸಂಬಂಧಿಸಿದ್ದು ಎಂದು ಹೇಳಲಿಲ್ಲವೆ? ನಮಗೂ ಅದಕ್ಕೂ ಸಂಬಂಧವಿಲ್ಲವೆಂದು ಹೇಳುತ್ತಿದ್ದರಲ್ಲಾ....ಕೋರ್ಟಿನ ಮುಂದೆ ಹಾಕಿದ್ದಾರೆ, ಗೈಡ್‌ಲೈನ್ ಪ್ರಕಾರ ಚುನಾವಣೆಗಳು ನಡೆಯುತ್ತದೆ.

ಶ್ರೀ ಎಸ್.ಎಸ್. ಪಾಟೀಲ್: ನಾನು ಕೇಳಿದ್ದಕ್ಕೆ ನೇರವಾದ ಉತ್ತರ ಕೊಟ್ಟುಬಿಡಿ.

(ಗೊಂದಲ)

ಶ್ರೀ ಕೆ.ಎನ್. ಸುಬ್ಬಾರೆಡ್ಡಿ: ಮಾನ್ಯ ಅಧ್ಯಕ್ಷರೆ, ಕಳೆದ ಒಂದೂವರೆ ವರ್ಷದಿಂದ ನನ್ನ ಸಮಸ್ಯೆ ಏನೆಂದರೆ,

(ಗೊಂದಲ)

MR. SPEAKER: I cannot compel the Minister to answer like this or like that. ಇಂಡಿವಿಜ್ಯುಯಲ್ ಕೇಸ್ ಬೇಕಾಗಿಲ್ಲ, ಗೈಡ್ ಲೈನ್ ಪ್ರಕಾರ ಮಾಡಿದ್ದಾರೆ.

ವಿಷಯ: (iv) ಶಾಸಕರ ಭವನದಲ್ಲಿ ಶಾಸಕರುಗಳಿಗೆ ಕೊಠಡಿಗಳು ಅಲಾಟ್ ಮಾಡದಿರುವುದರಿಂದ ಉಂಟಾಗಿರುವ ತೊಂದರೆ ಬಗ್ಗೆ.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ (ಬಸವನಗುಡಿ): ಮಾನ್ಯ ಅಧ್ಯಕ್ಷರೆ, ಒಂದೂವರೆವರ್ಷದಿಂದ ನನಗೆ ರೂಮ್ ಇಲ್ಲ, ಶಾಸಕರ ಭವನದಲ್ಲಿ ನನಗೊಂದು ರೂಮ್ ಬೇಕು ಎಂದು ಕೇಳಿದ್ದೆ. ಶೂನ್ಯವೇಳೆಯಲ್ಲಿ ಇದನ್ನು ಪ್ರಸ್ತಾಪಿಸಬೇಕೆಂದು ಸುಮಾರು 15 ದಿವಸಗಳಿಂದಲೂ ನಾನು ಮನವಿ ಮಾಡುತ್ತಿದ್ದು, ಇವತ್ತು ಅವಕಾಶ ಮಾಡಿದಿರಿ.

ಶ್ರೀ ಡಿ.ಬಿ. ಚಂದ್ರೇಗೌಡ: ಆ ವಿಷಯ ಇಲ್ಲಿ ಚರ್ಚೆ ಮಾಡುವ ಹಾಗಿಲ್ಲ.

ಅಧ್ಯಕ್ಷರು: ಅದು ಹೈಕೋರ್ಟಿನಲ್ಲಿ ಪೆಂಡಿಂಗ್ ಇದೆ. ಕಟ್ಟಡದ ಕನ್‌ಸ್ಟ್ರಕ್ಷನ್ ಬಗ್ಗೆ ಹೈಕೋರ್ಟಿನಲ್ಲಿ ಪೆಂಡಿಂಗ್ ಇರುವ ವಿಚಾರ ನಿಮಗೆ ಗೊತ್ತಿದೆ ಅಲ್ಲವೆ? ಹೀಗಿರುವಾಗ, ನಾವೇನು ಮಾಡುವುದಕ್ಕಾಗುತ್ತದೆ ಹೇಳಿ.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ: ಇದು ಬಹಳ ಮುಖ್ಯವಾದ ವಿಷಯ ಅನೇಕ ಎಂಎಲ್‌ಎ ಗಳವರಿಗೆ ರೂಮುಗಳಿಲ್ಲ.

ಶ್ರೀ ಭೈರೇಗೌಡ: ಅವರು ಹೇಳುತ್ತಿರುವುದಕ್ಕೆ ಬಹಳ ತೀವ್ರವಾದ ಆಕ್ಷೇಪಣೆ ಇದೆ. ಯಾರಿಗೆ ಯಾವ ರೂಮ್ ಕೊಡಬೇಕು ಎಂಬುದು ತಮ್ಮ ವಿವೇಚನೆಗೆ ಬಿಟ್ಟಿದ್ದು, ಹೀಗಿರುವಾಗ ಇಲ್ಲಿ ಬಹಿರಂಗವಾಗಿ ಇದರ ಬಗ್ಗೆ ಚರ್ಚೆ ಮಾಡುವುದು ಸರಿಯಲ್ಲ. ಯಾರಿಗೂ ಕೂಡ ಮರ್ಯಾದೆ ತರುವ ವಿಚಾರ ಇದು ಅಲ್ಲ;.

ಅಧ್ಯಕ್ಷರು: ಕನ್‌ಸ್ಟ್ರಕ್ಷನ್‌ಗೆ ಜಾಗ ಇದೆ ದುಡ್ಡು ಇದೆ, ಬಿಡುಗಡೆ ಆಗಿದೆ ಹೈಕೋರ್ಟಿನಲ್ಲಿ ತಡೆಯಾಜ್ಞೆಯಿರುವಾಗ ನಾನೇನು ಮಾಡಲಿ?

ಶ್ರೀ ಸಿ. ಭೈರೇಗೌಡ: ಆ ವಿಚಾರವನ್ನು ಇಲ್ಲಿ ಚರ್ಚೆ ಮಾಡುವ ಹಾಗಿಲ್ಲ.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ: ನಿಮ್ಮ ಅಡ್ವೋಕೇಟ್ ಜನರಲ್ ಇದ್ದಾರೆ ಸರ್ಕಾರದ ಲಾಯರ್ಸ್‌ಗಳಿದ್ದಾರೆ ಅದಷ್ಟು ಬೇಗ ಮಾಡಿಸಿ.

ಅಧ್ಯಕ್ಷರು: ಅದಷ್ಟು ಬೇಗ ಆಗುತ್ತದೆ ಬಿಡಿ, ನೀವು ಈ ವಿಚಾರ ಬಿಟ್ಟು ಬೇರೆ ವಿಚಾರ ಪ್ರಸ್ತಾಪಿಸಿ.

ವಿಷಯ: (v) ಹ್ಯಾಪಿಹೋಂ ಸಂಸ್ಥೆಯಂಥ ಸಾರ್ವಜನಿಕರಿಗೆ ವಂಚನೆ

ಶ್ರೀ ಕೆ.ಎನ್. ಸುಬ್ಬಾರೆಡ್ಡಿ (ಬಾಸವನಗುಡಿ): ಇವತ್ತು ಕೊನೆಯ ದಿವಸವಾಗಿರುವುದರಿಂದ ವಿಷಯ ಪ್ರಸ್ತಾಪಿಸಲು ನನಗೆ ಅವಕಾಶ ಕೊಡಿ. ಹ್ಯಾಪಿಹೋಂ ಎನ್ನುವುದನ್ನು ಮಾಡುತ್ತೇವೆಂದು ಹೇಳಿಕೊಂಡು ಎಲ್ಲಾ ಜನರಿಂದಲೂ ದುಡ್ಡು ವಸೂಲಿ ಮಾಡಿದ್ದಾರೆ. ಅಲ್ಲಿರುವ ಹರಿ ಜನರ ಜಾಗಗಳನ್ನು ಪರ್ಚೇಸ್ ಮಾಡಿದ್ದೇವೆ, ಈಜುಕೊಳ ಹಾಕಿಸಿದ್ದೇವೆ, ರೇಸಾರ್ಟ್ ಮಾಡಿದ್ದೇವೆ ಎಂದು ಹೇಳಿಕೊಂಡು, ಹೊಸಕೋಟೆ, ಬೆಂಗಳೂರು, ದೊಡ್ಡ ಬಳ್ಳಾಪುರ, ರಾಮನಗರ, ಕನಕಪುರ, ಇನ್ನು ಮುಂತಾದ ಕಡೆಗಳಲ್ಲಿ ಈ ರೀತಿಯ "ಹ್ಯಾಪಿಹೋಂ" ಎನ್ನುವ ಬೋರ್ಡ್‌ಗಳನ್ನು ಹಾಕಿದ್ದಾರೆ. ಇದರಲ್ಲಿ ಸಾಮಿಲಾರು ಜನರಿಂದ ದುಡ್ಡನ್ನು ವಸೂಲಿ ಮಾಡಿದ್ದಾರೆ, ಇದರಲ್ಲಿ ಲಾಯರ್ಸ್, ಡಾಕ್ಟರ್ಸ್, ಎಲ್ಲರಿಗೂ ಕೂಡ ಸೈಟ್ಸ್ ಕೊಡುತ್ತೇವೆಂದು ಹೇಳಿಕೊಂಡು ಚೀಟ್ ಮಾಡಿದ್ದಾರೆ. ಇದು ಬಹಳ ಸೀರಿಯಸ್ ವಿಷಯವಾಗಿರುವುದರಿಂದ ಮಾನ್ಯ ಸಹಕಾರ ಸಚಿವರು ಇವರ ಬಗ್ಗೆ ಉತ್ತರಿಸಬೇಕಾಗುತ್ತದೆ. ಇವರು ಹೇಳಿರುವಂತೆ ಹರಿಜನರ ಜಮೀನುಗಳನ್ನು ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ, ಇದು ನಿರ್ಬಂಧ. It is not possible for them to buy their lands. but the people have been induced to pay money. People are taken for a ride.